ವಿಚಾರಕ್ಕೆ ನಮ್ಮ ಇಲಾಖೆಯಿಂದ ಅಲೋ ಮಾಡಬಾರದು.

**ಚುಕ್ಕೆ ಗುರುತಿನ ಪ್ರಶ್ನೆ**

**ಕ್ರಮ.ಸಂಖ್ಯೆ** : **3712**

**ಸದಸ್ಯರ ಹೆಸರು** : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ)

**ಉತ್ತರಿಸುವವರು** : ಶ್ರೀ ಪಿ.ಜಿ.ಆರ್.ಸಿಂಧ್ಯಾ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು)

| ಪ್ರಶ್ನೆ | ಉತ್ತರ |
|---|---|
| ಅ. ಸರೋಜಿನಿ ಮಹಿಷಿ ವರದಿಯ ಪ್ರಮುಖವಾದ ಶಿಫಾರಸ್ಸುಗಳಾವುವು: | ಡಾ.ಸರೋಜಿನಿ ಮಹಿಷಿ ಸಮಿತಿಯ ವರದಿಯಲ್ಲಿ ಒಟ್ಟು 58 ಶಿಫಾರಸ್ಸುಗಳನ್ನು ಮಾಡಲಾಗಿದ್ದು, ಇವುಗಳಲ್ಲಿ 45 ಶಿಫಾರಸ್ಸುಗಳನ್ನು ಸರ್ಕಾರ ಅಂಗೀಕರಿಸಿತು. ಅನುಮೋದಿತ ಶೀಫಾರಸ್ಸುಗಳ ಪೈಕಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಮಾಡಲಾದ ಶಿಫಾರಸ್ಸುಗಳ ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.<br><br>ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ಸ್ಥಳೀಯರಿಗೆ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗಾವಕಾಶ ನೀಡುವ ಕುರಿತು ಕಾಲಕಾಲಕ್ಕೆ ಹೊರಡಿಸಲಾದ ರಾಜ್ಯ ಸರ್ಕಾರದ ಕೈಗಾರಿಕಾ ನೀತಿಯಡಿಯಲ್ಲಿ ಷರತ್ತುಗಳನ್ನು ವಿಧಿಸಲಾಗಿದೆ. ಅದರಂತೆ ಚಾಲ್ತಿಯಲ್ಲಿರುವ 2001–06 ಕೈಗಾರಿಕಾ ನೀತಿಯಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ.<br><br>ಕಂಡಿಕೆ 8.6(ಎ)– ಎಲ್ಲಾ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಯು ಸಾಧ್ಯವಿರುವಷ್ಟು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚುವರಿ ಉದ್ಯೋಗ ಅವಕಾಶಗಳನ್ನು |

| ಪ್ರಶ್ನೆ | ಉತ್ತರ |
|---|---|
| | ಕಲ್ಪಿಸಬೇಕಲ್ಲದೆ ಕನಿಷ್ಟ ಶೇ.80ರಷ್ಟು ಉದ್ಯೋಗವನ್ನು ಸ್ಥಳೀಯ ಜನರಿಗೆ ನೀಡತಕ್ಕದ್ದು. (ಸಿ ಮತ್ತು ಡಿ ಪ್ರವರ್ಗಗಳ ವಿಷಯದಲ್ಲಿ ಶೇ.100ರಷ್ಟು ಉದ್ಯೋಗ ಅವಕಾಶವನ್ನು ಸ್ಥಳೀಯ ಜನರಿಗೆ ನೀಡಬೇಕು) ಹಾಗೂ ಉತ್ತೇಜನಗಳನ್ನು ವಿತರಣೆ ಮಾಡುವಾಗ ಈ ವಿಚಾರದ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದು.<br><br>ಸ್ಥಳೀಯ ಜನರಿಗೆ ಉದ್ಯೋಗ ನೀಡುವ ಅವಶ್ಯಕತೆಯನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳು 5 ವರ್ಷಗಳವರೆಗೆ ಮೇಲ್ವಿಚಾರಣೆ ಮಾಡುತ್ತವೆ. ಕೈಗಾರಿಕೆಗಳು ಸ್ಥಳೀಯ ಜನರಿಗೆ ಮೇಲೆ ತಿಳಿಸಿದ ನಿಬಂಧನೆಗನುಸಾರವಾಗಿ ಉದ್ಯೋಗ ನೀಡಲು ತಪ್ಪಿದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ರಾಜ್ಯ ಮಟ್ಟದ ಸಮಿತಿಗೆ ತಿಳಿಸಲಾಗುವುದು ಹಾಗೂ ಈ ಸಮಿತಿಯು ಮುಂಜೂರಾದ ಬಂಡವಾಳ ಸಹಾಯಧನವನ್ನು ಮರುವಸೂಲಿ ಮಾಡಲು ಶಿಫಾರಸ್ಸು ಮಾಡುವುದು. ಇದಕ್ಕಾಗಿ ಸಹಾಯ ಧನವನ್ನು ವಿತರಣೆ ಮಾಡುವ ಮೊದಲು ಘಟಕಗಳಿಂದ ಮುಚ್ಚಳಿಕೆಯೊಂದನ್ನು ಪಡೆಯಲಾಗುವುದು. |
| | 50 ಅಥವಾ ಅದಕ್ಕಿಂತ ಹೆಚ್ಚು ನೌಕರರನ್ನು ಹೊಂದಿರುವ ಘಟಕಗಳಲ್ಲಿ ಸ್ಥಳೀಯರಿಗೆ ನಿಗಧಿತ ಪ್ರಮಾಣದಲ್ಲಿ ಉದ್ಯೋಗ ಅವಕಾಶ ನೀಡಿದ ಬಗ್ಗೆ ತ್ರೈಮಾಸಿಕ ವರದಿಯನ್ನು ಪಡೆದು ಪರಿಶೀಲಿಸಲಾಗುತ್ತಿದೆ. |

| ಪ್ರಶ್ನೆ | ಉತ್ತರ |
|---|---|
| ಆ.ಮೈಸೂರಿನ ಯಾವ ಯಾವ ಕಾರ್ಖಾನೆಗಳು ಈ ವರದಿಯಂತೆ ಕ್ರಮವಹಿಸಿರುತ್ತಾರೆ (ವಿವರಗಳನ್ನು ನೀಡುವುದು) | ಮೈಸೂರು ಜಿಲ್ಲೆಯಲ್ಲಿನ 37 ಕೈಗಾರಿಕೆಗಳಲ್ಲಿನ (ಮಾಹಿತಿ ತಂತ್ರಜ್ಞಾನ ಘಟಕಗಳನ್ನು ಹೊರತು ಪಡಿಸಿ) ಸ್ಥಳೀಯ ನೌಕರರು, ಒಟ್ಟು ನೌಕರರ ವಿವರಗಳನ್ನು ಅನುಬಂಧ–2ರಲ್ಲಿ ಸೂಚಿಸಲಾಗಿದೆ. |
| ಇ. ಮೈಸೂರಿನ ಯಾವ ಯಾವ ಕಾರ್ಖಾನೆಗಳವರ ಈ ವರದಿಯ ಶಿಫಾರಸ್ಸುಗಳನ್ನು ಪಾಲಿಸಿರುವುದಿಲ್ಲ | ಅನುಂಧ 2ರಲ್ಲಿ ಸೂಚಿಸಿರುವ 37ಘಟಕಗಳ ಪೈಕಿ 26 ಘಟಕಗಳಲ್ಲಿ ಸ್ಥಳೀಯ ಉದ್ಯೋಗಿಗಳ ಸಂಖ್ಯೆ ನಿಗಧಿತ ಪ್ರಮಾಣಕ್ಕಿಂತ ಕಡಿಮೆಯಿರುತ್ತದೆ. |
| ಈ. ಶಿಫಾರಸ್ಸು ಪಾಲಿಸದಿರುವ ಕಾರ್ಖಾನೆಗಳ ಮೇಲೆ ಕ್ರಮವಹಿಸುವಂತಾಗಲು ಸರ್ಕಾರವು ಯಾವ ಕ್ರಮ ವಹಿಸುವುದು. | ಸ್ಥಳೀಯರಿಗೆ ನಿಗದಿತ ಪ್ರಮಾಣದಲ್ಲಿ ಉದ್ಯೋಗ ನೀಡುವಲ್ಲಿ ಕೊರತೆ ಕಂಡು ಬಂದ ಘಟಕಗಳಿಗೆ ಅವರು ಮುಂಬರುವ ನೇಮಕಾತಿಗಳಲ್ಲಿ ಈ ಕೊರತೆಯನ್ನು ಸರಿಪಡಿಸುವಂತೆ ಸೂಚಿಸಲಾಗಿದೆ. |

## ಅನುಬಂಧ–1

### ಡಾ. ಸರೋಜಿನಿ ಮಹಿಷಿ ವರದಿಯಲ್ಲ ಒಳಗೊಂಡ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಸಂಬಂಧಿಸಿದ ಶಿಫಾರಸ್ಸುಗಳು

**ಸಂ. ಡಾ. ಸರೋಜಿನಿ ಮಹಿಷಿ ಸಮಿತಿಯ ಶಿಫಾರಸ್ಸುಗಳು**

2. ಕೇಂದ್ರ ಸರ್ಕಾರದ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಸಂಸ್ಥೆಯು ಸರಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿ ರೂ.1250ರ ವರೆಗೆ ಇರುವ ಎಲ್ಲಾ ಹುದ್ದೆಗಳಿಗೆ ನ್ಯಾಷನಲ್ ಎಂಪ್ಲಾಯ್‌ಮೆಂಟ್ ಸರ್ವೀಸಸ್ ಮೂಲಕ ಅಭ್ಯರ್ಥಿಗಳನ್ನು ನೇಮಕ ಮಾಡಬೇಕೆಂದು ಆದೇಶಿಸಿದೆ. ಮೇಲ್ಮಟ್ಟದ ಹುದ್ದೆಗಳಿಗೆ ಕೆಲವೆಡೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪದ್ಧತಿ ಇದೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾವಣೆ ಮಾಡುವ ಅವಶ್ಯಕತೆಯೂ ಇದೆ. ಆದರೆ ಗ್ರೂಪ್ ಡಿ ಹುದ್ದೆಗಳಿಗೆ ಹೊರ ರಾಜ್ಯದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಉಚಿತವಲ್ಲ, ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಿನಾಂಕ 23ನೇ ಜುಲೈ 1981ಕ್ಕಿಂತ ಹಿಂದೆ ಕನ್ನಡೇತರ ಹೆಸರುಗಳನ್ನೂ ನೋಂದಾಯಿಸಲಾಗಿದೆ. ಇವೆಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ಕನ್ನಡಿಗರಿಗೆ ಸಲ್ಲತಕ್ಕ ಉದ್ಯೋಗ ಪ್ರಮಾಣ ಈ ಕೆಳಗಿನಂತಿರಬೇಕೆಂದು ಸಮಿತಿ ಶಿಫಾರಸ್ಸು ಮಾಡುವುದು.

**ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸುಗಳು**

ಕೇಂದ್ರ ಸಾರ್ವಜನಿಕ ಉದ್ದಿಮೆಗಳಲ್ಲಿ ಗ್ರೂಪ್ ಸಿ ಮತ್ತು ಡಿ ಹುದ್ದೆಗಳಿಗೆ ಶೇಕಡಾ 100ರಷ್ಟು ಮತ್ತು ಗ್ರೂಪ್ ಬಿ ಹುದ್ದೆಗಳಿಗೆ ಶೇಕಡಾ 80ಕ್ಕೆ ಕಡಿಮೆ ಇಲ್ಲದಂತೆ ಮತ್ತು ಗ್ರೂಪ್ ಎ ಹುದ್ದೆಗಳಿಗೆ ಶೇ. 65ರಷ್ಟು ಕನ್ನಡಿಗರನ್ನು ನೇಮಿಸಿಕೊಳ್ಳಬೇಕು. ರಾಜ್ಯ ಸರ್ಕಾರದ ಅಥವಾ ಅಖಿಲ ಭಾರತ ಸೇವೆಯ ಅಧಿಕಾರಿಗಳನ್ನು ಈ ನೇಮಕಾತಿಯ ಸಮಯದಲ್ಲಿ ಒಂದೂಗೂಡಿಸಬೇಕು. ಕೇಂದ್ರ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಲು ನೆಲ, ಜಲ, ವಿದ್ಯುಚ್ಛಕ್ತಿ ಮುಂತಾದವುಗಳನ್ನು ರಾಜ್ಯ ಸರ್ಕಾರವು ನೀಡುವಾಗ ಮೇಲೆ ನಮೂದಿಸಿರುವ ಪೂರ್ವ ಷರತ್ತುಗಳನ್ನು ಹಾಕಬೇಕು.

3. ನಾಲ್ಕನೆಯ ವರ್ಗದ (ಗ್ರೂಪ್ – ಡಿ)

ಹುದ್ದೆಗಳಲ್ಲಿ ಶೇ.100

ವೇತನ ಶ್ರೇಣಿ ರೂ.1250ರ ತನಕ ಇರುವ ಇತರ ಹುದ್ದೆಗಳಲ್ಲಿ ಶೇ.80

ಉಳಿದ ಮೇಲ್ಮಟ್ಟದ ನೇರ ನೇಮಕಾತಿ ಆಧಾರದ ಮೇಲೆ ಭರ್ತಿ ಮಾಡುವ ಹುದ್ದೆಗಳಲ್ಲಿ ಶೇ.65.

ಹುದ್ದೆಗಳಿಗೆ ಕನ್ನಡಿಗರ ಸಂಖ್ಯೆ ನಿರ್ದಿಷ್ಟ ಪ್ರಮಾಣ ತಲುಪುವ ತನಕ ಎಲ್ಲಾ ಖಾಲಿ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು.

4. ಖಾಸಗಿ ಉದ್ದಿಮೆಗಳು ರಾಜ್ಯ ಸರ್ಕಾರದಿಂದ ನೆಲ,ಜಲ, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಪಡೆಯುತ್ತಿರುವುದರಿಂದ ಅವುಗಳ ಮೇಲೆ ಒತ್ತಡ ತರಲು ಸಾಧ್ಯವಿದೆ. ಉದ್ಯಮಗಳಲ್ಲಿ ಉನ್ನತ ಮಟ್ಟದ ಆಡಳಿತ ಹುದ್ದೆಗಳನ್ನು ಅವಶ್ಯವಿದ್ದಲ್ಲಿ ಬಿಟ್ಟು ಉಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸುವಂತೆ ಕಡ್ಡಾಯ ಮಾಡಬೇಕು.

ರಾಜ್ಯದಲ್ಲಿ ಸ್ಥಾಪಿತವಾಗಿರುವ ಖಾಸಗಿ ಉದ್ದಿಮೆಗಳು ರಾಜ್ಯ ಸರ್ಕಾರದಿಂದ ಪೂರ್ವಭಾವಿ ವ್ಯವಸ್ಥೆ ಸಹಾಯ ಧನವನ್ನು ಪಡೆದಿರುತ್ತದೆ. ಆದುದರಿಂದ ಇವುಗಳ ಉದ್ದಿಮೆಯಲ್ಲಿರುವ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಿಕೊಳ್ಳಬೇಕು.

ರಾಜ್ಯದಲ್ಲಿರುವ ಖಾಸಗಿ ಉದ್ದಿಮೆಗಳಿಗೆ ಕೆ.ಎಸ್.ಐ.ಡಿ.ಸಿ.. ಕೆ.ಎಸ್.ಎಫ್.ಸಿ., ಕೆ.ಇ.ಬಿ., ಮುನಸಿಪಾಲಿಟಿ, ನೀರು ಮತ್ತು ಒಳಚರಂಡಿ ಮುಂತಾದ ಸಂಸ್ಥೆಗಳು ಸೇವೆಯನ್ನು ಒದಗಿಸುವಾಗ ಈ ಪೂರ್ವ ಷರತ್ತನ್ನು ಹಾಕಬೇಕು.

21. ಸರ್ಕಾರಿ ಆದೇಶ ಸಂ.ಸಿಐ 121 ಎಸ್.ಪಿ.ಸಿ. 82 ದಿನಾಂಕ 30ನೇ ಅಕ್ಟೋಬರ್ 1983 ಇದರಲ್ಲಿ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಗೆ ಆಕರ್ಷಣೆಯಾಗಿ ಪರಿಷ್ಕೃತ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ಘೋಷಿಸಿದೆ. ಈ ಪ್ರೋತ್ಸಾಹ ರಿಯಾಯಿತಿಗಳನ್ನು ಕೊಡುವಾಗ ಕನ್ನಡಿಗರಿಗೆ ಆದ್ಯತೆ ಕೊಡುವಂತೆ ಆದೇಶಿಸಬೇಕು ಮತ್ತು ಸರ್ಕಾರದ ನೆರವನ್ನು ಪಡೆದು ಸ್ಥಾಪಿಸಲಾಗುವ ಕೈಗಾರಿಕೆಗಳು ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ಕೊಡಬೇಕೆಂಬ ಕರಾರನ್ನು ಹಾಕಬೇಕು.

ಈ ಶಿಫಾರಸ್ಸಿನ ಬಗ್ಗೆ ಕಾನೂನು ಇಲಾಖೆಯ ನೀಡಿದ ಅಭಿಪ್ರಾಯದ ಮೇರೆಗೆ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಹಾಗೂ ಅವುಗಳಿಗೆ ರಿಯಾಯಿತಿ ನೀಡುವ ಸಂದರ್ಭದಲ್ಲಿ ಕನ್ನಡಿಗರಿಗೆ ಆದ್ಯತೆಯನ್ನು ಕೊಡುವಂತೆ ಹಾಗೂ ಸರ್ಕಾರದ ನೆರವನ್ನು ಪಡೆದು ಸ್ಥಾಪಿಸಲಾಗುವ ಕೈಗಾರಿಕೆಗಳಿಗೆ ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ಕೊಡಬೇಕೆಂಬ ಕರಾರನ್ನು ಹಾಕಬೇಕೆಂಬ ಶಿಫಾರಸ್ಸನ್ನು ಒಪ್ಪಬಹುದು.

24. ನೂರಕ್ಕಿಂತ ಹೆಚ್ಚಿನ ಸಂಖ್ಯೆಯ ನೌಕರರು ಇರುವ ಖಾಸಗಿ ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಯನ್ನು ಸೇರಿಸುವಂತೆ ಉದ್ಯಮಿಗಳನ್ನು ಒತ್ತಾಯಿಸಬೇಕು.

ಈ ಶಿಫಾರಸ್ಸನ್ನು ಒಪ್ಪಬಹುದು.

25. ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿರುವ ರಾಜ

ಈ ಶಿಫಾರಸ್ಸನ್ನು ಒಪ್ಪಬಹುದು.

ಸರ್ಕಾರದ ಪ್ರತಿನಿಧಿಗಳು ಈ ಸಮಿತಿಗಳ ನಡವಳಿಕೆಗಳ ಬಗ್ಗೆ ಸರ್ಕಾರಕ್ಕೆ ವರದಿಗಳನ್ನು ಕಳುಹಿಸುವಂತೆಯೂ ಈ ವರದಿಗಳ ಪರಿಶೀಲನೆ ಒಂದು ಘಟಕವನ್ನು ರಚಿಸುವಂತೆಯೂ ವ್ಯವಸ್ಥೆ ಮಾಡಬೇಕು. ಈ ಘಟಕಕ್ಕೆ ಶಾಸನಬದ್ಧ ಅಂತಸ್ತು ದೊರೆಯುವಂತೆ ಮಾಡುವ ವ್ಯವಸ್ಥೆ ಮಾಡಬೇಕು. ಅವಶ್ಯವಿದ್ದರೆ ವಿಭಾಗ ಮಟ್ಟದಲ್ಲಿ ಸಹ ಈ ಘಟಕಗಳ ಶಾಖೆಗಳು ಪರಿಶೀಲನೆ ನಡೆಸುವಂತೆ ಮಾಡಬಹುದು.

28. ಮಹಾರಾಷ್ಟ್ರದಲ್ಲಿರುವ ಪದ್ಧತಿಯಂತೆ ಉದ್ಯಮಗಳಿಂದ ಕನ್ನಡಿಗರಿಗೆ ನಿಗಧಿಪಡಿಸಿದ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಒದಗಿಸುವ ಬಗ್ಗೆ ಪ್ರತಿ ವರ್ಷ ಘೋಷಣೆ ಪತ್ರವನ್ನು ಪಡೆಯುವ ಮತ್ತು ಪರಿಶೀಲಿಸುವ ಜವಾಬ್ದಾರಿಕೆಯನ್ನು ಕ್ರಮ ಸಂಖ್ಯೆ 25ನೇ ಶಿಫಾರಸ್ಸಿನಲ್ಲಿ ಸೂಚಿಸಿರುವ ಘಟಕಕ್ಕೆ ವಹಿಸಿಕೊಡಬೇಕು.

ಈ ಶಿಫಾರಸ್ಸನ್ನು ಒಪ್ಪಬಹುದು.

30. ಅಸ್ಸಿಲರಿ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡುವಾಗ ಕನ್ನಡಿಗರಿಗೆ ಪ್ರೋತ್ಸಾಹ ಕೊಡುವಂತೆ ಕ್ರಮ ತೆಗೆದುಕೊಳ್ಳಬೇಕು.

ಈ ಶಿಫಾರಸ್ಸನ್ನು ಒಪ್ಪಬಹುದು.

31. ಉದ್ಯಮಗಳ ಸ್ಥಾಪನೆ ಮತ್ತು ವಿಸ್ತರಣೆ ಪ್ರಸ್ತಾಪ ಬಂದಾಗ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯೂ ಮತ್ತು ಉದ್ಯಮಗಳಿಗೆ ಆರ್ಥಿಕ ನೆರವನ್ನು ಒದಗಿಸಿದಾಗ ಕರ್ನಾಟಕ ರಾಜ್ಯ ಆರ್ಥಿಕ ನಿಗಮವೂ ಉದ್ಯೋಗ ವಿನಿಮಯ

ಕೇಂದ್ರಗಳಿಗೆ ತಿಳಿಸಬೇಕು. ಈ ಕೇಂದ್ರಗಳು ತಮ್ಮಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳ ನೇಮಕಕ್ಕೆ ಪ್ರಯತ್ನಿಸಬೇಕು.

ಈ ಶಿಫಾರಸ್ಸನ್ನು ಒಪ್ಪಬಹುದು.

40. ರಾಜ್ಯದಲ್ಲಿರುವ ಉದ್ಯಮಗಳಿಗೆ ಬೇಕಾಗಿರುವ ವಿಶೇಷ ತಾಂತ್ರಿಕ ತರಬೇತಿ ಪಡೆಯಲು ಉದ್ಯೋಗ ತರಬೇತಿ ಕೇಂದ್ರಗಳಲ್ಲಿ (ಐಟಿಐ) ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅವಕಾಶ ಮಾಡಿದರೆ ಹೊರ ರಾಜ್ಯದಿಂದ ಈ ವಿಶೇಷ ತರಬೇತಿ ಪಡೆದ ಅಭ್ಯರ್ಥಿಗಳನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳ ಬೇಕೆಂದು ಶಿಫಾರಸ್ಸು ಮಾಡಲಾಯಿತು. ಕರೆಯಿಸಿಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಸಮಿತಿಯು ಉದ್ಯಮಗಳಿಗೆ ಭೇಟಿ ಕೊಟ್ಟಾಗ ಇಂತಹ ತಾಂತ್ರಿಕ ವಿಷಯಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ಸಂಗ್ರಹಿಸಿಕೊಟ್ಟಿರುವುದು. ಈ ಬಗ್ಗೆ ಸರ್ಕಾರವು ಸೂಕ್ತ ವ್ಯವಸ್ಥೆ ಮಾಡಬೇಕು.

41 ಪ್ರಾಥಮಿಕ ಮಟ್ಟದಲ್ಲಿಯೇ ಐಚ್ಛಿಕವಾಗಿ ವೃತ್ತಿ ತರಬೇತಿಪಡೆಯುವ ವ್ಯವಸ್ಥೆ ಮಾಡಬೇಕು.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಲಾಯಿತು.

42 ಕೈಗಾರಿಕಾ ವಸಾಹತುಗಳು ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳು ಸ್ಥಾಪನೆಯಾಗುವ ಪ್ರದೇಶಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯುವ ಅವಕಾಶ ಮಾಡಲು ಅಲ್ಲಿ ವೃತ್ತಿ ತರಬೇತಿ ಕೇಂದ್ರ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳನ್ನು ತೆರೆಯಲು ವ್ಯವಸ್ಥೆ ಮಾಡಬೇಕು.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಲಾಯಿತು.

50 ಕೇಂದ್ರ ಸರ್ಕಾರದ 8ನೇ ಮಾರ್ಚಿ 1984ರ ಅಧೀಕೃತ ಜ್ಞಾಪನ ಪತ್ರದಂತೆ ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿಯ ಪರಮಾವಧಿ ರೂ. 1250ಕ್ಕಿಂತ ಹೆಚ್ಚು ಇರದ ಹುದ್ದೆಗಳಿಗೆ ನ್ಯಾಷನಲ್ ಎಂಪ್ಲಾಯ್‌ಮೆಂಟ್ ಸರ್ವಿಸ್ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ವೇತನ ಶ್ರೇಣಿಯ ಮಿತಿಯನ್ನು 1600ಕ್ಕೆ ಏರಿಸುವುದಲ್ಲದೇ ವೇತನ ಶ್ರೇಣಿ ಪರಿಷ್ಕರಣೆಯಾದಾಗಲೇ ಈ ಮಿತಿಯನ್ನು ಪರಿಷ್ಕರಿಸುತ್ತಾ ಬರಬೇಕು.

2ನೇ ಶಿಫಾರಸ್ಸಿನ ಬಗ್ಗೆ ಮಾಡಿರುವ ಶಿಫಾರಸ್ಸನ್ನು ನೋಡಬಹುದು.

ಅನುಬಂಧ–2

ಚುಕ್ಕೆ ಗುರುತಿನ ವಿಧಾನ ಸಭೆ ಪ್ರಶ್ನೆ 3712– ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡರವರಿಂದ

ಮೈಸೂರು

| ಕ್ರ.ಸಂ | ಉದ್ಯಮದ ಹೆಸರು ಮತ್ತು ವಿಳಾಸ | ಕನ್ನಡಿಗರು | | | | ಇತರರು | | | | ಒಟ್ಟು |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | |
| 1 | ರಾಣಿ ಮದ್ರಾಸ್, ನಂ.87/84, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು. | 8 | 10 | 179 | 60 | 5 | 6 | 8 | 0 | 276 |
| 2 | ರೆಕಿಟ್ ಬೆಂಜ್ಕುಖರ್ ಆಫ್ ಇಂಡಿಯಾ, ನಂ.61, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು. | 0 | 2 | 20 | 41 | 0 | 3 | 5 | 0 | 71 |
| 3 | ಬೆಮೆಲ್, ಬೆಳವಾಡಿ ಕೈ.ಪ್ರದೇಶ, ಮೈಸೂರು | 28 | 28 | 58 | 1800 | 10 | 12 | 20 | 23 | 1979 |

| ಕ್ರ.ಸಂ | ಉದ್ಯಮದ ಹೆಸರು ಮತ್ತು ವಿಳಾಸ | ಕನ್ನಡಿಗರು | | | | ಇತರರು | | | | ಒಟ್ಟು |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | |
| 4 | ವಿಕ್ರಾಂತ್ ಟೈರ್ ಲಿ.ಕೆ.ಆರ್. ಎಸ್.ರಸ್ತೆ, ಮೇಟಗಳ್ಳಿ, ಮೈಸೂರು. | 18 | 112 | 154 | 2293 | 14 | 75 | 32 | 120 | 2818 |
| 5 | ಟ್ರೈಟಾನ್ ವಾಲ್‌ವ್ಸ್, ಬೆಳವಾಡಿ ಕೈಗಾರಿಕಾ ಪ್ರದೇಶ, ಮೈಸೂರು. | 15 | 12 | 120 | 216 | 0 | 0 | 0 | 0 | 363 |
| 6 | ವಿಜಯಾ ವೈರ್ಸ್ ಪ್ರೈ.ಲಿ.ಕೆಆರ್‌ಎಸ್ ರಸ್ತೆ, ಮೆಟಗಳ್ಳಿ, ಮೈಸೂರು. | 1 | 15 | 24 | 217 | 0 | 0 | 0 | 6 | 263 |
| 7 | ಕಂಬೈಂಡ್ ಇಂಡಸ್ಟ್ರೀಸ್ ಲಿ.ಕೈಗಾರಿಕ ಸಬರ್ಬ್, ಮೈಸೂರು ಸೌತ್. | 1 | 7 | 8 | 187 | 2 | 1 | 2 | 4 | 212 |
| 8 | ವಾಸು ಅಗರಬತ್ತೀಸ್, ಕೆ.ಆರ್.ಪುರಂ, ಮೈಸೂರು. | 12 | 10 | 52 | 56 | 0 | 0 | 0 | 0 | 130 |
| 9 | ರಂಗ್ಸ್‌ಸನ್ ಎಲೆಕ್ಟ್ರಾನಿಕ್ಸ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮೈಸೂರು. | 10 | 18 | 76 | 46 | 0 | 0 | 0 | 0 | 150 |

| ಕ್ರ.ಸಂ | ಉದ್ಯಮದ ಹೆಸರು ಮತ್ತು ವಿಳಾಸ | ಕನ್ನಡಿಗರು | | | | ಇತರರು | | | | ಒಟ್ಟು |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | |
| 10 | ಅಡ್ವಾನ್ಸ್ ಕಾಂಪೋನೆಂಟ್ಸ್ ಪ್ರೈ.ಲಿ. ಬೆಳವಾಡಿ ಕೈಗಾರಿಕಾ ಪ್ರದೇಶ. ಮೈಸೂರು. | 9 | 10 | 30 | 40 | 0 | 0 | 0 | 0 | 89 |
| 11 | ಬರೂಕಾ ಅಲ್ಯೂಮೀನಿಯಂ ಲಿ. ಕೆ.ಆರ್.ಎಸ್.ರಸ್ತೆ, ಮೈಸೂರು. | 14 | 36 | 40 | 106 | 5 | 10 | 16 | 14 | 241 |
| 12 | ಇ.ಡಿ.ಪ್ಯಾರಿ(ಇಂಡಿಯಾ)ಹೆಬ್ಬಾಳ್ ಕೈ. ಪ್ರ. ಮೈಸೂರು. | 16 | 24 | 58 | 22 | 0 | 0 | 4 | 5 | 129 |
| 13 | ಕಾರ್ಬೋ ಸಿರ್ಯಾಮಿಕ್ಸ್ ಬೆಳವಾಡಿ ಕೈ. ಪ್ರ. ಮೈಸೂರು. | 0 | 8 | 30 | 18 | 0 | 0 | 0 | 2 | 58 |
| 14 | ಕಿರ್ಲೋಸ್ಕರ್ ಎಲೆಕ್ಟ್ರಿಕಲ್ ಕಂ.ಲಿ, ಯೂನಿಟ್–4 ಬೆಳವಾಡಿ ಕೈ ಪ್ರದೇಶ, ಮೈಸೂರು. | 16 | 40 | 160 | 100 | 6 | 4 | 5 | 6 | 337 |
| 15 | ವಿಪ್ರೋ ಲಿ.ಹೆಬ್ಬಾಳ್ ಕೈಪ್ರ ಮೈಸೂರು | 9 | 19 | 60 | 12 | 3 | 5 | 0 | 0 | 108 |

| ಕ್ರ.ಸಂ | ಉದ್ಯಮದ ಹೆಸರು ಮತ್ತು ವಿಳಾಸ | ಕನ್ನಡಿಗರು | | | | ಇತರರು | | | | ಒಟ್ಟು |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | |
| 16 | ತ್ರಿವೇಣಿ ಇಂಜಿನಿಯರಿಂಗ್ ವರ್ಕ್ಸ್, ಪ್ರೈ.ಲಿ. ಕೆ.ಆರ್. ಎಸ್ ರಸ್ತೆ, ಮೇಟಗಳ್ಳಿ, ಮೈಸೂರು. | 6 | 5 | 30 | 29 | 5 | 5 | 0 | 0 | 80 |
| 17 | ಆಟೋಮೊಟಿವ್ ಆಕ್ಸಲ್ಸ್ ಲಿ. ಹೂಟಗಳ್ಳಿ ಮೈಸೂರು. | 20 | 30 | 300 | 70 | 20 | 40 | 30 | 40 | 550 |
| 18 | ಫಾಲ್ಕಂ ಟೈರ್ಸ್ ಲಿ.ಕೆಆರ್ಎಸ್ ರಸ್ತೆ, ಮೈಸೂರು. | 40 | 60 | 180 | 220 | 14 | 10 | 5 | 5 | 534 |
| 19 | ಮೈಸೂರು ಚಿಪ್ ಬೋರ್ಡ್ಸ್ ಲಿ, ಬೆಳವಾಡಿ ಮೈಸೂರು. | 30 | 40 | 210 | 110 | 26 | 24 | 0 | 10 | 450 |
| 20 | ಮೈಸೂರು ಪಾಲಿಮರ್ಸ್ ರಬ್ಬರ್ ಪ್ರಾಡಕ್ಟ್ಸ್ ಕೆ.ಆರ್.ಎಸ್.ರಸ್ತೆ, ಮೈಸೂರು. | 39 | 50 | 86 | 150 | 14 | 0 | 0 | 0 | 339 |
| 21 | ಜಗದಾಳೆ ಫುಡ್ಸ್ ಪ್ಲಾಟ್ ನಂ.310, ಹೆಬ್ಬಾಳ್ ಕೈಗಾರಿಕಾ ಪ್ರದೇಶ ಮೈಸೂರು. | 4 | 10 | 20 | 14 | 0 | 3 | 0 | 0 | |

| ಕ್ರ.ಸಂ | ಉದ್ಯಮದ ಹೆಸರು ಮತ್ತು ವಿಳಾಸ | ಕನ್ನಡಿಗರು | | | | ಇತರರು | | | | ಒಟ್ಟು |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | |
| 22 | ಬ್ರೂಕ್‌ಬಾಂಡ್ ಇಂಡಿಯಾ ಲಿಮಿಟೆಡ್, ಕೈಗಾರಿಕಾ ಪ್ರದೇಶ, ಮೈಸೂರು. | 5 | 10 | 60 | 25 | 2 | 10 | 10 | 20 | |
| 23 | ದೀಪ ಆಕ್ಸಿಜನ್ ಪ್ರೈ ಲಿ, ಮೇಟಗಳ್ಳಿ, ಕೈಗಾರಿಕಾ ಪ್ರದೇಶ, ಮೈಸೂರು. | 5 | 10 | 20 | 30 | 1 | 2 | 2 | 0 | |
| 24 | ಏಷಿಯನ್ ಕೇಬಲ್ಸ್, ಲಿ, ಮೇಟಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು. | 10 | 25 | 50 | 60 | 5 | 5 | 10 | 0 | |
| 25 | ಒ.ಕೆ.ಎಸ್.ಲ್ಯೂಬ್ರಿಕೇಟ್ಸ ಹೆ.ಕೈ.ಪ್ರ. ಮೈಸೂರು | 5 | 15 | 20 | 30 | 3 | 4 | 2 | 1 | |
| 26 | ರಾಜ್‌ಕಮಲ್ ಪಾಲಿಮರ್ಸ್, ಮೈಕೈಪ್ರ. ಮೈಸೂರು | 6 | 4 | 25 | 35 | 2 | 3 | 5 | 0 | |
| 27 | ಇಂಡಿಯ ಲಿಸ್ಟನ್ ರ್ಯಾಮ್ಸ್, ಬೆ.ಕೈ.ಪ್ರ. ಮೈಸೂರು | 10 | 20 | 25 | 30 | 2 | 5 | 8 | 0 | |

| ಕ್ರ.ಸಂ | ಉದ್ಯಮದ ಹೆಸರು ಮತ್ತು ವಿಳಾಸ | ಕನ್ನಡಿಗರು | | | | ಇತರರು | | | | ಒಟ್ಟು |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | |
| 28 | ವೆನ್‌ಲಾನ್ ಪಾಲಿಮರ್ಸ್, ಬೆಳವಾಡಿ ಕೈಗಾರಿಕಾ ಪ್ರದೇಶ, ಹುಣಸೂರು ರಸ್ತೆ ಮೈಸೂರು | 10 | 7 | 103 | 40 | 8 | 4 | 18 | 6 | |
| 29 | ಸ್ಯಾಮ್ಸ್ ಟ್ರಾನ್ಸಮಿಷನ್, ಹೆ.ಕೈ.ಪ್ರ. ಮೈಸೂರು | 8 | 10 | 30 | 10 | 2 | 6 | 2 | 2 | |
| 30 | ಹಿಂದೂಸ್ತಾನ್ ಆಯಿಲ್ ಕಾರ್ಪೋರೇಷನ್ ಎಲ್.ಪಿ.ಜಿ. ಬಾಟ್ಲಿಂಗ್ ಹೆ.ಕೈ.ಪ್ರ. ಮೈಸೂರು | 6 | 8 | 20 | 26 | 2 | 2 | 30 | 11 | |
| 31 | ವಿಕ್ರಾಂತ್ ರೇಟಿಯಂಟ್ ಪ್ಲಾಂಟ್ ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರು | 32 | 64 | 181 | 13 | 16 | 18 | 6 | 0 | |
| 32 | ವಿಎಸ್‌ಡಿ ಪ್ರಿಸಿಷನ್ ಕಾಂಪೋನೆಂಟ್ಸ್ ಕೆ.ಆರ್.ಎಸ್.ರಸ್ತೆ ಮೈಸೂರು | 8 | 18 | 58 | 14 | 2 | 6 | 0 | 0 | |

| ಕ್ರ.ಸಂ | ಉದ್ಯಮದ ಹೆಸರು ಮತ್ತು ವಿಳಾಸ | ಕನ್ನಡಿಗರು | | | | ಇತರರು | | | | ಒಟ್ಟು |
|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | |
| 33 | ಮಾಣಿಕ್ಯಂ ಪ್ಲಾಸ್ಟಿಜಿಂ ಪ್ರೈ.ಲಿ.ಬಿಕೈಪ್ರ ಮೈಸೂರು | 10 | 15 | 40 | 20 | 6 | 10 | 4 | 0 | |
| 34 | ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್, ಮೇಟಗಳ್ಳಿ, ಮೈಸೂರು | 12 | 10 | 106 | 12 | 2 | 0 | 0 | 0 | 142 |
| 35 | ಟಿ.ವಿ.ಎಸ್.ಮೋಟಾರ್ಸ್, ಪ್ರೈ.ಲಿ. ಬ್ಯಾತಹಳ್ಳಿ, ಮೈಸೂರು, | 5 | 78 | 380 | 112 | 17 | 90 | 48 | 50 | 780 |
| 36 | ಚಾಮುಂಡಿ ಟೆಕ್ಸ್‌ಟೈಲ್ಸ್ (ಸಿಲ್ಕ್ ಮಿಲ್) ಲಿ, ಹೂಟಗಳ್ಳಿ, ಹೆಬ್ಬಾಳು ಕೈ.ಪ್ರ.ಮೈಸೂರು | 8 | 19 | 32 | 24 | 0 | 0 | 0 | 0 | 83 |
| 37 | ಅಂಟ್ಲಾಂಟಿಕ್ ಸ್ಪಿನ್ನಿಂಗ್ ವರ್ಕ್ಸ್ ಲಿ, ಮೈಸೂರು ಬೆಂಗಳೂರು ರಸ್ತೆ, ಮೈಸೂರು | 38 | 64 | 86 | 62 | 12 | 10 | 13 | 0 | 285 |
| | ಒಟ್ಟು | 474 | 923 | 3131 | 6350 | 206 | 373 | 285 | 325 | 12067 |

**ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ :–** ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಸರ್ಕಾರ ಸರೋಜಿನಿ ಮಹಿಷಿ ವರದಿಗೆ ದ್ರೋಹ ಬಗೆದಿದ್ದಾರೆ. ಇದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿಲ್ಲ ವರದಿಗೆ ಎನ್ನುವುದು ನನ್ನ ಮೊದಲನೆ ಅನಿಸಿಕೆ. ನಿಜವೇ? ಅದಕ್ಕೆ ಉತ್ತರ ಹೇಳಿ.

**ಶ್ರೀ ಪಿ.ಜಿ.ಆರ್. ಸಿಂಧ್ಯ :–** ಈ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ.

**ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ :** ಮೈಸೂರು ನಗರದಲ್ಲಿ ಇರತಕ್ಕಂಥ 37 ಘಟಕಗಳಲ್ಲಿ ಸುಮಾರು 26 ಘಟಕಗಳಲ್ಲಿ ಇದನ್ನು ಅನುಷ್ಠಾನಗೊಳಿಸಿಲ್ಲ. ಸ್ಥಳೀಯರಿಗೆ ಉದ್ಯೋಗ ಅದರಲ್ಲೂ ಸಿ ಮತ್ತು 3 ಪ್ರವರ್ಗಗಳವರಿಗೆ ನೂರಕ್ಕೆ ನೂರರಷ್ಟು ಕೊಡಬೇಕೆಂದು ತಿಳಿಸಿರುವ ಪ್ರಕಾರ ನೀವು ಮಾಡಿಲ್ಲ. ಮೈಸೂರಿನ ವಿಚಾರದಲ್ಲಿ ತಾನು ಏನು ಕ್ರಮ ತೆಗೆದುಕೊಂಡಿದ್ದೀರಿ.

**ಶ್ರೀ ಪಿ.ಜಿ.ಆರ್.ಸಿಂಧ್ಯ :** ಮಾನ್ಯ ಅಧ್ಯಕ್ಷರೇ, ಸರೋಜಿನಿ ಮಹಿಷಿಯ ವರದಿ, ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟಂತೆ ಇರುವಂತಹ ಶಿಪಾರಸ್ಸಿನಂತೆ ಕೆಲವರು ಅನುಷ್ಠಾನಗೊಳಿಸದೆ ಇರುವುದು ನನ್ನ ಗಮನಕ್ಕೆ ಬಂದಿದೆ. ಗ್ರಾಮೀಣ ಪ್ರದೇಶ ಗಳಲ್ಲಿ, ಬೆಂಗಳೂರು, ಮೈಸೂರು ಹೀಗೆ ಒಂದೆರಡು ಕಡೆಗಳಲ್ಲಿ ಬಿಟ್ಟರೆ, ಬಾಕಿ ಕಡೆಗಳಲ್ಲಿ ವರದಿ ಅನುಷ್ಠಾನವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಯಾವ ಘಟಕಗಳಲ್ಲಿ ಇದನ್ನು ಅನುಷ್ಠಾನಕ್ಕೆ ತಂದಿಲ್ಲ. ಅಲ್ಲಿ ತಕ್ಷಣ ನಾವು ಜಂಟಿ ನಿರ್ದೇಶಕರ ಮೂಲಕವಾಗಿ ಆದೇಶವನ್ನು ಕೊಟ್ಟು ಮುಂದೆ ಅವರು ರಿಕ್ರೂಟ್‌ಮೆಂಟ್ ಮಾಡಬೇಕು ಎನ್ನುವ ನಿಬಂಧನೆಯನ್ನು ಹಾಕುವವರಿದ್ದೇವೆ. ನಾನು ಈಗಾಗಲೇ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು ಕೂಡ ಮಾಡಿದ್ದೇವೆ. ಕೈಗಾರಿಕೆಗಳಲ್ಲದೆ, ಇನ್‌ಫರ್ಮೇಷನ್ ಟೆಕ್ನಾಲಜಿ ಮತ್ತು ಬಯೋ ಟೆಕ್ನಾಲಜಿ ಏನಿದೆ, ಇವುಗಳಲ್ಲಿ ಸಹ ಸರೋಜಿನಿ ಮಹಿಷಿಯ ವರದಿಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಬೇಕೆನ್ನು ವುದರ ಬಗ್ಗೆ ಒಂದು ಸಚಿವರ ಸಂಪುಟದ ಉಪಸಮಿತಿಯನ್ನು ಮಾಡಿದ್ದೇವೆ.

ಅಧಿವೇಶನದ ನಂತರ ಎಲ್ಲೆಲ್ಲಿ ಅನುಷ್ಠಾನಗೊಳಿಸಿಲ್ಲ ಹಾಗು ಯಾವ ರೀತಿಯಲ್ಲೂ ಕೈಗಾರಿಕೆಗಳು ಬೇರೆ ಕಡೆಗೆ ಹೋಗದ ಹಾಗೆ ಇಲ್ಲೇ ಉಳಿಸಿಕೊಂಡು ಆ ಕೈಗಾರಿಕೆಗಳಲ್ಲಿ ನಮ್ಮವರಿಗೆ ಉದ್ಯೋಗ ಕೊಡುವುದಕ್ಕೆ ಯಾವ ರೀತಿ ಕಾನೂನು ಪ್ರಕಾರ ಕ್ರಮತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಒಂದು ಆ್ಯಕ್ಷನ್ ಪ್ಲಾನ್ ಅನ್ನು ತಯಾರು ಮಾಡುತ್ತೇನೆ. ಹಾಗೂ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

**ಅಧ್ಯಕ್ಷರು** :– ಈಶ್ವರಪ್ಪನವರು, ದಯಮಾಡಿ ಈಗ ಯಾರಿಗೂ ಅವಕಾಶ ಕೊಡುತ್ತಿಲ್ಲ. ಇವತ್ತು ಅರ್ಧ ಗಂಟೆ ಚರ್ಚೆಗೆ ಒಂದು ವಿಷಯವನ್ನು ತೆಗೆದುಕೊಳ್ಳುತ್ತಿದ್ದೇನೆ. ಹಿಂದೆ ಮಾನ್ಯ ಶಂಕರಲಿಂಗೇಗೌಡರು, ವಾಟಾಳ್ ನಾಗರಾಜ್‌ರವರು ಕೇಳಿದಂತಹ ವಿಚಾರದಲ್ಲಿ ಅರ್ಧ ಗಂಟೆ ಚರ್ಚೆ ಇದೆ. ಆದ್ದರಿಂದ ಅದರಲ್ಲಿ ಪಾರ್ಟಿಸಿಪೇಟ್ ಮಾಡಿ.

**ಶ್ರೀ ವಾಟಾಳ್ ನಾಗರಾಜ್** :– ಇವತ್ತೆ ತೆಗೆದುಕೊಂಡು ಬಿಡಿ

**ಅಧ್ಯಕ್ಷರು** :– ಇವತ್ತು ಚರ್ಚೆ ಇದೆ. ಈಗ ಈಶ್ವರಪ್ಪನವರು..

**ಶ್ರೀ ಪಿ.ಜಿ.ಆರ್. ಸಿಂಧ್ಯಾ** :– ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳು ನಷ್ಟದಲ್ಲೇ ಇರುವಂತಹ ವಿಚಾರದಲ್ಲಿ ಚರ್ಚೆ ಇದೆ. ಎರಡು ಸೇರಿ ತೆಗೆದುಕೊಳ್ಳುತ್ತೀರಾ?

**ಅಧ್ಯಕ್ಷರು** :– ಈಗ ಅದರ ಬಗ್ಗೆ ಟೈಂ ಕೊಟ್ಟ ಹಾಗೆ ಇದೆ.

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೇ, ಮೊನ್ನೆ ನನ್ನ ಒಂದು ಪ್ರಶ್ನೆಗೆ ನೀವೇ ಇವತ್ತು ಅರ್ಧ ಗಂಟೆ ಚರ್ಚೆ ಮಾಡೋಣವೆಂದು ಅನುಮತಿಯನ್ನು ಕೊಟ್ಟಿದ್ದೀರಿ. ಅದು ಸಾರ್ವಜನಿಕ ಉದ್ಯಮಗಳು ನಷ್ಟದಲ್ಲಿರುವಂಥಾದ್ದು ಮತ್ತು ಲಾಕ್‌ಔಟ್‌ನ ಬಗ್ಗೆ ಚರ್ಚೆ ಮಾಡೋಣವೆಂದು ತಾವು ಒಪ್ಪಿದ್ದೀರಿ, ಮತ್ತು ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಒಪ್ಪಿಕೊಂಡಿದ್ದಾರೆ.

**ಶ್ರೀ ವಾಟಾಳ್ ನಾಗರಾಜ್** : ಮಾನ್ಯ ಅಧ್ಯಕ್ಷರೇ, ಆ ಚರ್ಚೆಯಲ್ಲೆ ಇದನ್ನು ಸೇರಿಸಿಕೊಳ್ಳಿ.

**ಶ್ರೀ ಪಿ.ಜಿ.ಆರ್. ಸಿಂಧ್ಯ** : ಆಗಬಹುದು.

**ಅಧ್ಯಕ್ಷರು** : ಆಯಿತು, ಇದೆಲ್ಲವನ್ನು ಚರ್ಚೆಯಲ್ಲಿ ಸೇರಿಸೋಣ.